ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ, ಶ್ರೀ ಎಸ್.ವ್ಹಿ. ಸಂಕನೂರ ಹಾಗೂ ಇತರರು ನಿಯಮ 330 ರ ಮೇರೆಗೆ ನೀಡಿರುವ ಸೂಚನೆ

ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳಿಗಾಗಿ ಹಣ ಹೊಂದಿಸಲು ಅಗತ್ಯ ದಿನನಿತ್ಯ ವಸ್ತುಗಳ ಬೆಲೆ ಏರಿಕೆಯನ್ನು ಮಾಡಿ ಸಾರ್ವಜನಿಕರ ಮೇಲೆ ತೆರಿಗೆ ರೂಪದಲ್ಲಿ ಹಣ ವಸೂಲಿ ಮಾಡುತ್ತಿದೆ. ಇದು ಸಹಜವಾಗಿ ಬಡವರ ಮತ್ತು ಜನಸಾಮಾನ್ಯರ ತಿಂಗಳ ವೆಚ್ಚದ ಮೇಲೆ ಪರಿಣಾಮ ಬೀರಿ, ಜನರು ಜೀವನ ಸಾಗಿಸುವುದು ಕಷ್ಟಕರವಾಗುತ್ತಿದೆ. ಆದ್ದರಿಂದ ರಾಜ್ಯ ಸರ್ಕಾರವು ಬೆಲೆ ಏರಿಕೆಯನ್ನು ಪುನರ್ ಪರಿಶೀಲಿಸಿ ದರ ಏರಿಕೆ ಕ್ರಮವನ್ನು ಸಂಪೂರ್ಣವಾಗಿ ಹಿಂಪಡೆಯಬೇಕು ಎಂಬ ಕುರಿತು ಚರ್ಚಿಸಲು ಪ್ರಸ್ತಾಪ.

ಸನ್ಮಾನ್ಯ ಮುಖ್ಯಮಂತ್ರಿಯವರ ಉತ್ತರ:

ನಮ್ಮ ಸರ್ಕಾರವು ಸಂಪನ್ಮೂಲಗಳ ನ್ಯಾಯಯುತ ಹಂಚಿಕೆ ಮತ್ತು ಸಮಾನ ಅವಕಾಶಗಳನ್ನು ಸೃಜಿಸುವ ಉದ್ದೇಶದಿಂದ ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳನ್ನು 2023 ರಲ್ಲಿ ಜಾರಿಗೊಳಿಸಿತು. ಗ್ಯಾರಂಟಿ ಯೋಜನೆಗಳು ರಾಜ್ಯದ ಪರಿಶಿಷ್ಟ ಜಾತಿ/ ಪಂಗಡದವರು, ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ಎಲ್ಲಾ ವರ್ಗದ ಬಡವರನ್ನು ಸಮಾನತೆಗೆ ತರುವ, ಮಹಿಳೆಯರನ್ನು ಆರ್ಥಿಕವಾಗಿ ಬಲಗೊಳಿಸುವ ಹಾಗು ಯುವಜನರಿಗೆ ಆತ್ಮಸ್ಥೈರ್ಯ ನೀಡುವ ಯೋಜನೆಗಳಾಗಿವೆ. ರಾಜ್ಯದ ಆರ್ಥಿಕ ಪ್ರಗತಿಗೆ ಬಂಡವಾಳ ಹೂಡಿಕೆಯನ್ನು ವ್ಯಾಪಕವಾಗಿ ಆಕರ್ಷಿಸುವುದು, ಹೆಚ್ಚು ಉದ್ಯೋಗ ಸೃಷ್ಟಿಸುವುದು ಎಷ್ಟು ಮುಖ್ಯವೋ ಸಮಾಜದ ಎಲ್ಲಾ ವರ್ಗಗಳ ನಡುವೆ ಸಂಪತ್ತನ್ನು ಸಮಾನವಾಗಿ ಹಂಚಿಕೆ ಮಾಡುವುದು ಅಷ್ಟೇ ಮುಖ್ಯವಾಗಿರುತ್ತದೆ. ಅಭಿವೃದ್ಧಿಯ ಫಲವನ್ನು ಬಡವರು, ಶೋಷಿತರು ಹಾಗು ದುರ್ಬಲ ವರ್ಗದವರಿಗೆ ಹಂಚುವಲ್ಲಿ ಈ ಗ್ಯಾರಂಟಿ ಯೋಜನೆಗಳು ಸಹಕಾರಿಯಾಗಿದೆ. ಪ್ರತಿ ಕುಟುಂಬವು ಆರ್ಥಿಕವಾಗಿ ಸಬಲರಾಗುವುದರಿಂದ ಅರ್ಥ ವ್ಯವಸ್ಥೆಯಲ್ಲಿ ಬಳಕೆ ಪ್ರಮಾಣವು (consumption) ಹೆಚ್ಚಾಗುತ್ತದೆ. ಇದರಿಂದಾಗಿ ಆರ್ಥಿಕ ಚಟುವಟಿಕೆಗಳು ಹೆಚ್ಚಾಗಲಿದ್ದು, ರಾಜ್ಯದ ಸಾಮಾಜಿಕ ಹಾಗು ಆರ್ಥಿಕ ಬೆಳವಣಿಗೆಯು ಹೆಚ್ಚಾಗಲಿದೆ.

ನಮ್ಮ ಸರ್ಕಾರವು ಗ್ಯಾರಂಟಿ ಯೋಜನೆಗಳಿಗೆ ಆಯವ್ಯಯದಲ್ಲಿ ಅಗತ್ಯ ಅನುದಾನವನ್ನು ಒದಗಿಸಿದ್ದು, ಅದರಂತೆ ಎಲಾ ಅರ್ಹ ಫಲಾನುಭವಿಗಳಿಗೆ ಈ ಯೋಜನೆಗಳ ಅನುಕೂಲ

ತಲುಪಿಸುವ ಕ್ರಮವಹಿಸಿರುತ್ತದೆ. 2024-25ನೇ ಸಾಲಿನ ಆಯವ್ಯಯದಲ್ಲಿ ಗ್ಯಾರಂಟಿ ಯೋಜನೆಗಳಿಗೆ 52,009 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿರುತ್ತದೆ. ಗ್ಯಾರಂಟಿ ಯೋಜನೆಗಳಿಗೆ ಯಾವುದೇ ಅನುದಾನ ಕೊರತೆ ಉಂಟಾಗಿರುವುದಿಲ್ಲ.

ರಾಜ್ಯದ ಒಟ್ಟಾರೆ ವೆಚ್ಚ ನಿರ್ವಹಣೆಗಾಗಿ ಸರ್ಕಾರವು ಅಗತ್ಯ ಸಂಪನ್ಮೂಲ ಕ್ರೋಢೀಕರಣದ ಕ್ರಮಗಳನ್ನು ಕೈಗೊಳ್ಳುವುದು ಸಹಜ ಪ್ರಕ್ರಿಯೆಯಾಗಿರುತ್ತದೆ. ಅಂತೆಯೇ ತೆರಿಗೆ ದರಗಳ ಪರಿಷ್ಕರಣೆಯು ಸಂಪನ್ಮೂಲ ಕ್ರೋಢೀಕರಣದ ಭಾಗವಾಗಿರುತ್ತದೆ. ಸರ್ಕಾರವು ವಿಧಿಸುವ ತೆರಿಗೆ ದರಗಳು ಕಾಲಾನುಕ್ರಮವಾಗಿ ಪರಿಷ್ಕರಣೆಯಾಗಬೇಕಾಗಿರುತ್ತದೆ. ಆದರೆ ನಮ್ಮ ರಾಜ್ಯದ ಸ್ವಂತ ತೆರಿಗೆ ಹಾಗು ತೆರಿಗೆಯೇತರ ಸ್ವೀಕೃತಿಗಳಿಗೆ ಸಂಬಂಧಿಸಿದಂತೆ ಹಲವು ವರ್ಷಗಳಿಂದ ತೆರಿಗೆ ದರಗಳು ಹಾಗು ಬಳಕೆದಾರರ ಶುಲ್ಕಗಳು ಪರಿಷ್ಕರಣೆಯಾಗಿರುವುದಿಲ್ಲ. ಅಲ್ಲದೆ, ನೆರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ವಿಧಿಸುತ್ತಿರುವ ತೆರಿಗೆ ದರಗಳು ಕಡಿಮೆಯಿದ್ದು, ಇದರಿಂದ ರಾಜ್ಯಕ್ಕೆ ತೆರಿಗೆ ನಷ್ಟ ಉಂಟಾಗುತ್ತಿದೆ.

ಆದ್ದರಿಂದ ನಮ್ಮ ಸರ್ಕಾರವು ತೆರಿಗೆ ದರಗಳನ್ನು ಪರಿಷ್ಕರಣೆ ಮಾಡುವ ಮೂಲಕ ರಾಜ್ಯದ ರಾಜಸ್ವ ಸಂಗ್ರಹಣೆಯನ್ನು ಹೆಚ್ಚಿಸುವ ಕ್ರಮ ಕೈಗೊಂಡಿರುತ್ತದೆ. ಅಲ್ಲದೆ, ತೆರಿಗೆ ದರಗಳ ಪರಿಷ್ಕರಣೆಯಿಂದ ಜನಸಾಮಾನ್ಯರಿಗೆ ಹೊರೆಯಾಗದಂತೆ ಸರ್ಕಾರವು ಎಚ್ಚರವಹಿಸಿರುತ್ತದೆ. ಜನಸಮಾನ್ಯರ ತೀರಾ ಅವಶ್ಯಕ ಹಾಗು ದಿನಬಳಕೆಯಾಗಿರುವ ಪೆಟ್ರೋಲ್ ಹಾಗು ಡೀಸೆಲ್ ದರಗಳು ತೆರಿಗೆ ದರ ಪರಿಷ್ಕರಣೆಯ ನಂತರವು ಸಹ ನೆರೆ ರಾಜ್ಯಗಳಿಗೆ ಹೋಲಿಸಿದರೆ ಕಡಿಮೆಯೇ ಇರುತ್ತದೆ. ಆದ್ದರಿಂದ ಸರ್ಕಾರದ ಈ ಸಂಪನ್ಮೂಲ ಕ್ರೋಢೀಕರಣದ ಕ್ರಮವು ರಾಜ್ಯದ ರಾಜಸ್ವವನ್ನು ಹೆಚ್ಚಿಸುವುದರೊಂದಿಗೆ ಸಾರ್ವಜನಿಕರಿಗೆ ಉತ್ತಮ ಸೇವೆ ನೀಡಲು ಸಹಕಾರಿಯಾಗಿದೆ.

ಸಂಖ್ಯೆ: FD/96/2024-DS-BR-FINANCE DEPT.SEC

(ಸಿದ್ದರಾಮಯ್ಯ)

ಮುಖ್ಯಮಂತ್ರಿ